ತಪ್ಪಿ... ಆತಂಕದಿಂದ ಗಂಟಲು ಒಣಗಿದಂತಾದಾಗ ಹೇಳಿದ್ದಳು ಸೊಸೆ,

'ನೀವು ಕೆಲಸದೋರಿಗೆ ಏನೂ ಅನ್ನೋಕೆ ಹೋಗ್ಬೇಡಿ ಅತ್ತೆ. ಹೊಸಬರನ್ನ ಹುಡುಕ್ಬೇಕು ಅಂದ್ರೆ ಜೀವ ಬಾಯಿಗೆ ಬರುತ್ತೆ. ನಮಗೆ ಅಡ್ಜೆಸ್ಟ್ ಆಗೋರು ಸಿಗೋದೂ ಕಷ್ಟ' ಸೀದ ಪಲ್ಯದ ವಾಸನೆ ಪಂಕಜಾಕ್ಷಿಯ ಮೂಗಿಗೆ ಬಡಿಯಿತು.

'ತಪ್ಪು ಮಾಡಿದ್ರೆ ಒಂದು ಮಾತು ಹೇಳ್ಬಾರ್ದೇನೇ? ಯಾವ ಮಹಾ ವಿಷಯ ಅಂತ ಚಾಡಿ ಚುಚ್ಬೇಕು?'

ಅಸಹನೆಯಿಂದ ಕೇಳಿದ್ದರು. ಮಾತು ಕೊಂಡಿ ಜೋಡಿಸಿಕೊಂಡು ಅವರಿಗೆ ಏನೂ ಗೊತ್ತಾಗುವುದಿಲ್ಲ ಎನ್ನುವ ಮಾತು ಆಗಲೇ ಸೊಸೆಯ ಬಾಯಿಂದ ಉದುರಿದ್ದು. ಬಳಿ ಓಡಿನಿಂದ ಗೀರಿದಂತಾಗಿದ್ದು. ಮಾತು ಬೆಳೆಸಲು ಹೋಗಿರಲಿಲ್ಲ ಪಂಕಜಾಕ್ಷಿ. ತಾವೇನು ಇಲ್ಲೇ ಗೂಟ ಹೊಡೆದುಕೊಂಡು ಕೂರಬೇಕಾಗಿದೆಯಾ? ತಮಗೂ ತಮ್ಮ ಮನೆ, ಸಂಸಾರ ಉಂಟೇ ಉಂಟು. ಅಲ್ಲಿ ತಮಗೆ, ತಮ್ಮ ಮಾತಿಗೆ ಬೆಲೆಯೂ

ಹೆಚ್ಚೂಕಡಿಮೆ ಮಗನ ಮನೆಯಲ್ಲಿದ್ದ ಒಂದು ತಿಂಗಳಲ್ಲಿ ಒಂದು ಮಾತು ಅರ್ಥ ಮಾಡಿಕೊಂಡಿದ್ದರು ಪಂಕಜಾಕ್ಷಿ. ಮನೆ ಕೆಲಸದವರು ತಮಗೆ ಸಂಬಳ ಎಣಿಸುವವರ ಮಾತಿಗೆ ಬೆಲೆ ಕೊಡುತ್ತಾರೇ ವಿನಾ ಉಳಿದಂತೆ ಇಲ್ಲಿ ವಯಸ್ಸಿಗೆ, ಸಂಬಂಧಕ್ಕೆ ಬೆಲೆ ಇಲ್ಲ. ವಯಸ್ಸಾದವರು ಅಂದರೆ ಮತ್ತಷ್ಟು ಸಸಾರ. ಈ ಸುಪನಾತಿ ಮಾತ್ರವಾ? ಮಗು ನೋಡಿಕೊಳ್ಳುವವಳೂ ಧೋರಣೆ ಮಾಡುತ್ತಾಳೆ. 'ಹಾಲು ಕುಡಿದ್ನೇ? ಹಣ್ಣು ತಿಂದ್ನೇ?' ಎಂದು ವಿಚಾರಿಸಿಕೊಂಡರೆ ಉತ್ತರಿಸುವುದಕ್ಕೆ ಬಿಗುಮಾನ. ಅಥವಾ ಹಾಗೆನಿಸುತ್ತದೆಯಾ? ಏನೋ

***

ವಾಪಸು ಊರಿಗೆ ಬಂದ ಪಂಕಜಾಕ್ಷಿಗೆ ಮಗಳ ಬಳಿ ಹೇಳಿಕೊಳ್ಳುವುದು ಬೆಟ್ಟದಷ್ಟಿತ್ತು. 'ನಮಗಿಂತಾ ಆ ಮನೇಲಿ ಕೆಲಸದವರಿಗೇ ಹೆಚ್ಚು ಮಣೆ' ಎನ್ನುವುದಕ್ಕಿಂತ ತಾವು ಕಳೆದುಕೊಂಡು ಬಂದಿದ್ದರ ಕುರಿತು ಒಳಗೊಳಗೇ ಕುದಿಯುತ್ತಿತ್ತು ಸಂಕಟ. ಯಾರ ಹತ್ತಿರವಾದರೂ ಹೇಳಿಕೊಳ್ಳದಿದ್ದರೆ ಎದೆ ಒಡೆದು ಹೋಗುತ್ತದೆಯೇನೋ ಎನಿಸುವ ತಳಮಳ. ತಮ್ಮ ಬಳಿ ಒಂದು ನೀಲದ ಹರಳಿನ ಉಂಗುರ ಇಟ್ಟುಕೊಂಡಿದ್ದರು ಪಂಕಜಾಕ್ಷಿ. 'ಕೆಲವರ ರಾಶಿಗೆ ನೀಲ ಭಾರೀ ಆಗಿ ಬರುತ್ತದೆಯಂತೆ, ಥೇಟ್ ವಜ್ರದ ಹಾಗೆ' ಎನ್ನುವ ಮಾತು ಯಾರ ಬಾಯಿಂದಲೋ ಕೇಳಿದಾಗಿನಿಂದ ಅವರಿಗೆ ಅದರ ಗಿರ ಹಿಡಿದಿತ್ತು. ಅವರ ಯೋಗ್ಯತೆಗೆ ಅದು ದೊಡ್ಡ ವಸ್ತು ಏನಲ್ಲ. ಮಕ್ಕಳು ಸಣ್ಣಕ್ಕಿದ್ದಾಗ ಹಾಕಿದ ಕಿವಿಯ ಮುರ, ಉಂಗುರ, ಗಾಳಿಯಲ್ಲಿ ಹಾರಿ ಹೋಗುತ್ತದೆ ಅನ್ನುವಂತಿದ್ದ ಚಿನ್ನದ ಸರ, ಪೆಟ್ಟಿಗೆಯ ಮೂಲೆಯಲ್ಲಿ ವಿಚಾರಿಸುವವರಿಲ್ಲದೆ ಬಿದ್ದಿತ್ತು. ಮಕ್ಕಳೆಲ್ಲಾ ಬೆಳೆದು ದೊಡ್ಡವರಾಗಿ ತಂತಮ್ಮ ದಾರಿ ಹಿಡಿದ ಮೇಲೂ ಅವಕ್ಕೆ ಮೋಕ್ಷ ಸಿಕ್ಕಿರಲಿಲ್ಲ. ಗಂಡನ ತಲೆ ತಿಂದು, ಒಂದು ದಿನ ಅವರ ಬೆನ್ನು ಬಿದ್ದು ಪೇಟೆಗೆ ಹೋಗಿದ್ದರು ಪಂಕಜಾಕ್ಷಿ. ಹೆಂಡತಿಯ ರಗಳೆಗೆ ಅವರನ್ನು ಹಿಂದಿಟ್ಟುಕೊಂಡು ಬಂದಿದ್ದರೂ ಗಂಡ ಕೈ ಬಿಚ್ಚಿ ದುಡ್ಡು ಖರ್ಚು ಮಾಡಲು ಚೌಕಾಶಿ ಮಾಡಿರಲಿಲ್ಲ. ಅಡಿಗರ ಹೋಟೆಲಲ್ಲಿ ಬೆಣ್ಣೆಮಸಾಲೆ, ಜಾಮೂನು, ನೊರೆನೊರೆಯ ಘಮಘಮ ಕಾಫಿ. ಸಣ್ಣಪುಟ್ಟ ವಿವರಗಳೂ ನಿನ್ನೆ ಮೊನ್ನೆ ನಡೆದಂತೆ ನೆನಪಿದೆ ಪಂಕಜಾಕ್ಷಿಗೆ, ವರ್ಷ ಮೂರ್ನಾಲ್ಕು ಕಳೆದರೂ

ಬಳಕೆಯ ಅಕ್ಕಸಾಲಿಗರ ಅಂಗಡಿಗೆ ಹೋಗಿ ಬಯಕೆ ಮುಂದಿಟ್ಟಿದ್ದಾಯ್ತು. 'ನೀಲದ ಹರಳನ್ನು ತಾನು ಮನೆಯಲ್ಲಿ ತಂದಿಟ್ಟುಕೊಳ್ಳುವುದಿಲ್ಲ. ಒಳ್ಳೆಯದಾದರೆ ಒಳ್ಳೆಯದು. ಕೆಟ್ಟದ್ದಾದರೆ ಕೆಟ್ಟದ್ದೇ. ಹಾಗಾಗಿ ಹೊರಗಿನವರ ಕೈಲಿ ಉಂಗುರ ಮಾಡಿಸಿ ಹಾಗಿಂದ ಹಾಗೇ ಇಲ್ಲಿಗೆ ತಂದು ಕೊಡುತ್ತೇನೆ' ಎಂದು ಆತ ಹೇಳಿದ್ದು ಕೇಳಿ ಮೈಯಲ್ಲಿ ಜುಮುಜುಮು, 'ಏರಿಸಿದರೆ ಶಿಖರಕ್ಕೇ ಹತ್ತಿಸಿಬಿಡುತ್ತದೆ' ಎನ್ನುವ ಪುಳಕದಿಂದ. ಒಂದು ದಿನ ಪುಟ್ಟ ಪೆಟ್ಟಿಗೆಯಲ್ಲಿ ನೀಲದ ಉಂಗುರ ಮನೆಗೆ ಬಂದೇ ಬಂತು. ಅದೇನು ಸಂಭ್ರಮ, ಜೊತೆಗೆ ಢವಢವ. ದೇವರ ಎದುರಿಗಿಟ್ಟು ಹೂವೇರಿಸಿ ಪೂಜೆ ಮಾಡಿ, ಗಂಡನ ಕೈಯಿಂದ ಉಂಗುರ ತೊಡಿಸಿಕೊಂಡು ಬೀಗಿದ್ದರು ಪಂಕಜಾಕ್ಷಿ.

ಎಡಗೈನ ನಡುಬೆರಳಲ್ಲಿ ಒಪ್ಪವಾಗಿ ಕೂತಿತ್ತು ಉಂಗುರ. ನಾಲ್ಕೆಂಟು ದಿನ ಕಳೆದು, ಯಾಕೋ ಸ್ವಲ್ಪ ಬಳಲಿಕೆ, ಜೀವಕ್ಕೆ ಸುಖ ಇಲ್ಲ ಎಂದು ಪುರುಸೊತ್ತಾಗಿ ಪೇಟೆಗೆ ಹೋಗಿ ಡಾಕ್ಟರ ಕೈಲಿ ಪರೀಕ್ಷೆ ಮಾಡಿಸಿಕೊಂಡಿದ್ದ ಗಂಡ ಡಯಾಬಿಟೀಸಿನ ಹಣೆಪಟ್ಟಿ ಹೊತ್ತುಕೊಂಡು ಮರಳಿದ್ದರು. ಅದೇನು ಈಗ ಹೆದರಿಸುವಂಥ ಕಾಯಿಲೆ ಅಲ್ಲ, ಎಲ್ಲರ ಮನೆಯಲ್ಲೂ ಬೀಡು ಬಿಟ್ಟಿರುವಂಥದ್ದು, ಸೂಕ್ತ ಔಷಧೋಪಚಾರ, ಪಥ್ಯಪಾನಗಳಿಂದ ಅಂಕೆಯಲ್ಲಿಟ್ಟುಕೊಳ್ಳಬಹುದು ಎಂದು ಎದೆ ಗಟ್ಟಿ ಮಾಡಿಕೊಳ್ಳಲು ಯತ್ನಿಸಿದ್ದರೂ 'ಅನಿಷ್ಟಕ್ಕೆಲ್ಲಾ ಶನೀಶ್ವರ ಗುರಿ' ಎನ್ನುವಂತೆ ಉಂಗುರದ ಮೇಲೆ ಸಂಶಯ ಹುಟ್ಟಿ ಪಂಕಜಾಕ್ಷಿ ಅದನ್ನು ಬೆರಳಿಂದ ತೆಗೆದು ಮೂಲೆಗೆ ಹಾಕಿದ್ದರು.

ಮೂಲೆಗೆ ಅಂದರೆ ಅವರ ನಗಗಳನ್ನಿಟ್ಟುಕೊಳ್ಳುವ ಪೆಟ್ಟಿಗೆಯ ಮೂಲೆಗೆ. 'ಆಗಿ ಬರದಿದ್ದರೆ ಮನೆಯಲ್ಲಿಟ್ಟುಕೊಳ್ಳಬಾರದು' ಎನ್ನುವ ಹೇಳಿಕೆ ಇದ್ದರೂ ಬಿಸಾಕಲು ಬರುವುದಿಲ್ಲವಲ್ಲ? ಮತ್ತೆ ಮಾರಲು ಕೊಳ್ಳುವವರು ಸಿಗಬೇಕಲ್ಲ? 'ಹುಚ್ಚು ನಿಂಗೆ. ಅಪ್ಪನ ಕಾಯಿಲೆ ಒಳಗಿಂದೊಳಗೆ ಯಾವಾಗಿಂದ ಶುರುವಾಗಿತ್ತೋ? ಉಂಗುರ ಹಾಕ್ಕೊಂಡಿದ್ದಕ್ಕೇ ಪರೀಕ್ಷೆ ಮಾಡಿಸೋ ಮನಸ್ಸು ಬಂದು ಒಳ್ಳೇದೇ ಆಯ್ತು ಅಂತ ಯಾಕೆ ಅಂದುಕೋಬಾರ್ದು ನೀನು?' ಅಂದಿದ್ದಳು ಮಗಳು.

'ಕಾಗೆ ಕೂರುವುದಕ್ಕೂ, ಟೊಂಗೆ ಮುರಿಯುವುದಕ್ಕೂ ಸಮಸಮ ಆಯ್ತು' ಅನಿಸಿದರೂ, ಗಂಡ ಕೂಡ ಅದನ್ನೇ ಹೇಳಿದರೂ, ಮತ್ತೆ ಅದನ್ನು ಧರಿಸಬೇಕೆಂಬ ಅಪೇಕ್ಷೆ ಮೂಡದೆ 'ಬಿದ್ದಿರಲಿ ಅಲ್ಲೇ...' ಎಂದು ಅದನ್ನು ಮರೆತುಬಿಟ್ಟಿದ್ದರು ಪಂಕಜಾಕ್ಷಿ. ಮಗನ ಮನೆಗೆ ಹೋಗುವಾಗ ಯಾಕೆ ಅದರ ನೆನಪಾಯ್ತೋ? ಅವನು ಇಲ್ಲಿಗೆ ಬಂದಾಗ ಕೊಡದೆ ಅಲ್ಲಿಗೇ ತೆಗೆದುಕೊಂಡು ಹೋಗಿ ಕೊಡಬೇಕೆಂದು ಯಾಕೆ ಬುದ್ಧಿ ಬಂತೋ? ಅದಕ್ಕೂ ಇದೆ ಸಕಾರಣ. ಹೊರಡುವ ಮುನ್ನ ದಿನಬಳಕೆಯ ಒಡವೆಗಳ ಜೊತೆ ಪೆಟ್ಟಿಗೆಯಲ್ಲಿದ್ದ ಎರಡೆಳೆಯ ಅವಲಕ್ಕಿ ಸರ, ಮತ್ತೆರಡು ಬಳೆಗಳನ್ನು ಧರಿಸಿಕೊಂಡು ಹೋಗಬೇಕೆಂದು ಪೆಟ್ಟಿಗೆ ತೆಗೆದಾಗ ಉಂಗುರದ ಡಬ್ಬಿ ಕಣ್ಣಿಗೆ ಬಿದ್ದಿತ್ತು. ಸ್ವಂತಕ್ಕೊಂದು ಜಾಗ ಹುಡುಕಲು ಓಡಾಡುತ್ತಿದ್ದ ಮಗನಿಗೆ ಉಂಗುರದ ಪ್ರಭಾವದಿಂದ ಅವನು ಇಚ್ಛಿಸಿದಲ್ಲಿ, ಇಚ್ಛಿಸಿದ ಬೆಲೆಗೆ ತಕ್ಕ ನಿವೇಶನ ದೊರೆತು ಆಸೆಗೆ ಮಿತಿ ಎಲ್ಲಿ? ಗಂಡ 'ಇಟ್ಟುಕೋ' ಎಂದು ಧಾರಾಳವಾಗಿ ಕೊಟ್ಟಿದ್ದ ನೂರರ ಕೆಲ ನೋಟುಗಳ ಜೊತೆ ಉಂಗುರವೂ ಪರ್ಸಿನೊಳಗೆ ಸೇರಿಕೊಂಡು, ಶನಿವಾರ ಪೂಜೆ ಮಾಡಿ ಮಗನಿಗೆ ಧರಿಸಲು ಕೊಡಬೇಕು ಎಂದು ಪಂಕಜಾಕ್ಷಿಯ ಮನೋಗತ.

ಮೊದಲ ಶನಿವಾರ ಮಗ ಕೈಗೆ ಸಿಗಲಿಲ್ಲ. ಯಾವುದೋ ಕೆಲಸ ಎಂದು ಹೊರಗೆ ಹೋದವನು ಬಂದದ್ದು ರಾತ್ರಿ. ಮತ್ತೊಂದು ಶನಿವಾರಕ್ಕೆ ಕಾರ್ಯಕ್ರಮ ಮುಂದೂಡಿ, ಮಗನ ಕಿರುಬೆರಳಿಗೆ ಒಪ್ಪವಾಗಿ ಕೂರಬಹುದಾದ ಉಂಗುರವನ್ನು ಅವನ ಕೈಗೆ ತೊಡಿಸಿ, 'ಏನಾದರೂ ಕೆಟ್ಟಶಕುನ ಆದರೆ ತೆಗೆದಿಟ್ಟುಬಿಡು' ಎಂದು ಬೋಧನೆ ಮಾಡಬೇಕು ಅಂದುಕೊಂಡಿದ್ದರು ಪಂಕಜಾಕ್ಷಿ. ಅವನಿಗೊಂದು ಅಚ್ಚರಿ ಹುಟ್ಟಿಸುವುದರ ಜೊತೆ ನೀಲದೊಡನೆ ತಳುಕು ಹಾಕಿಕೊಂಡ ಕತೆಯನ್ನೂ ಹೇಳಿ ಜಾಗ್ರತೆ ಮೂಡಿಸಬೇಕು ಅಂದುಕೊಂಡಿದ್ದರೆ ಕತೆ ಬೇರೆಯೇ ದಿಕ್ಕಿಗೆ ಹೊರಳಿತು. ಕಿಟ್ ಬ್ಯಾಗಿನ ತಳದಲ್ಲಿ ಪರ್ಸ್ ಇಟ್ಟು, ಮೇಲೆ ದಿನಬಳಕೆಯ ಬಟ್ಟೆಬರೆ ಜೋಡಿಸಿ, ಯಾರಿಗೂ ಗೊತ್ತಾಗುವುದಿಲ್ಲ ಎಂದು ನಿರುಮ್ಮಳವಾಗಿದ್ದರು.

ಶನಿವಾರ ಬೆಳಗಾತ ನೋಡಿದರೆ ಪರ್ಸಿನೊಳಗಿದ್ದ ಉಂಗುರ ಮಂಗಮಾಯ. ನೂರರ ಕೆಲ ನೋಟುಗಳೂ ಕಾಣೆಯಾಗಿವೆ ಎಂದು ಅನುಮಾನ. ಎಷ್ಟು ಎಂದು ನಿಖರವಾದ ಅಂದಾಜಿಲ್ಲ. ಹೇಳಲೋ ಬೇಡವೋ, ಹೇಳಲೋ ಬೇಡವೋ ತೊಳಲಾಟ. ಮನೆಗೆ ಮರಳಿದ ಮೇಲೆ ತಾನು ಉಂಗುರ ತಂದಿದ್ದು ಹೌದು ಎಂದು ಮತ್ತೊಮ್ಮೆ ಖಾತ್ರಿಪಡಿಸಿಕೊಳ್ಳಬೇಕು ಎನ್ನುವ ಗೊಂದಲದ ಮನಸ್ಥಿತಿ. ಅಷ್ಟರಲ್ಲಾಗಲೇ 'ನಿಮಗೆ ಗೊತ್ತಾಗಲ್ಲ ಅತ್ತೆ' ಎಂದು ಸೊಸೆಯ ಕೈಲಿ ಕಿವಿ ತಿರುಪಿಸಿಕೊಂಡಿದ್ದಾಗಿತ್ತು. ಅವಳು ಹೇಳಿದ್ದೂ ಸುಳ್ಳೇನಲ್ಲ. ಇವತ್ತಿದ್ದು ನಾಳೆ ಗಂಟುಮೂಟೆ ಕಟ್ಟುವ ತಾನು ಅವರ ವ್ಯವಸ್ಥೆಗೆ ಭಂಗ ತಂದರೆ ಕಷ್ಟ ಅವರಿಗೇ.

ಯಾರೊಬ್ಬರು ತೆಗೆದಿದ್ದರೂ ಎಲ್ಲರ ಮೇಲೂ ಹುಟ್ಟುತ್ತದೆ ಗುಮಾನಿ. ಮನೆಯಲ್ಲೊಂದು ಯುದ್ಧಕಾಂಡ. ಸೊಸೆ ಬೆಲೆಬಾಳುವ ಯಾವುದನ್ನೂ ಮನೆಯಲ್ಲಿಟ್ಟುಕೊಳ್ಳುವುದಿಲ್ಲ ಎಂದು ಗೊತ್ತಿದೆ. ಚಿನ್ನ ಲಾಕರಿನಲ್ಲಿ. ಅಗತ್ಯಕ್ಕೆ ಬೇಕಾದಷ್ಟು ದುಡ್ಡು ತಂದುಕೊಳ್ಳುವ ವ್ಯವಸ್ಥೆ. ತನ್ನಿಂದಾಗಿ, ತನ್ನ ಮೈಮರೆವಿನಿಂದಾಗಿ, ಆ ಮನೆಯಲ್ಲಿ ಯಾವ ಅಲ್ಲೋಲಕಲ್ಲೋಲವೂ